ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-8 Issue-3, November-December 2026, Pp. 7-13
©*IIMRD*, Mysuru
www.iimrd.com

ಜಿ.ಎಸ್.ಎಸ್. ಅವರ ಕಾವ್ಯಗಳಲ್ಲಿ ಸ್ತ್ರೀ ಸಂವೇದನೆ

ಮೀನಾಕ್ಷಿ ಎನ್. ಪಿ
ಕನ್ನಡ ಸಹಾಯಕ ಪ್ರಾಧ್ಯಾಪಕರು, ದಯಾನಂದ ಸಾಗರ್ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ಕುಮಾರಸ್ವಾಮಿ ಲೇಔಟ್, ಬೆಂಗಳೂರು.

ಸಾರಾಂಶ: (Abstract)

ಸ್ತ್ರೀಯು ಸಮಾಜದಲ್ಲಿ ಶಕ್ತಿ, ಸಮೃದ್ಧಿ, ಪ್ರಕೃತಿ ಮತ್ತು ಸೃಜನಶೀಲತೆಯ ಸಂಕೇತವಾಗಿ ಗುರುತಿಸಲ್ಪಟ್ಟಿದ್ದಾಳೆ. ತಾಯಿ, ಪತ್ನಿ, ಮಗಳು, ಸಹೋದರಿ ಮುಂತಾದ ವಿವಿಧ ಪಾತ್ರಗಳ ಮೂಲಕ ಕುಟುಂಬ ಹಾಗೂ ಸಮಾಜದ ನಿರ್ಮಾಣದಲ್ಲಿ ಮಹತ್ವದ ಪಾತ್ರ ವಹಿಸುತ್ತಾಳೆ. ಆಧುನಿಕ ಸಮಾಜದಲ್ಲಿ ಸ್ತ್ರೀಯು ಸಮಾನ ಹಕ್ಕು, ಸ್ವಾತಂತ್ರ್ಯ ಮತ್ತು ಅವಕಾಶಗಳಿಗೆ ಅರ್ಹಳಾಗಿದ್ದಾಳೆ. ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರ ಕಾವ್ಯಗಳಲ್ಲಿ ಸ್ತ್ರೀ ಸಂವೇದನೆಯು ಕೇವಲ ಶೋಷಣೆ ಅಥವಾ ನೋವಿನ ಅಭಿವ್ಯಕ್ತಿಗೆ ಸೀಮಿತವಾಗದೆ, ಪ್ರೀತಿ, ತ್ಯಾಗ, ಮಾತೃತ್ವ, ಸೃಜನಶೀಲತೆ ಮತ್ತು ಮಾನವೀಯ ಮೌಲ್ಯಗಳ ರೂಪದಲ್ಲಿ ಅನಾವರಣಗೊಂಡಿದೆ. ಮಹಿಳೆಯನ್ನು ಕೇವಲ ದೈಹಿಕ ಸೌಂದರ್ಯದ ನೆಲೆಯಲ್ಲಿ ನೋಡದೆ, ಆಕೆಯ ಅಂತರಂಗದ ಸೌಂದರ್ಯ, ಬೌದ್ಧಿಕ ಸಾಮರ್ಥ್ಯ ಮತ್ತು ವ್ಯಕ್ತಿತ್ವವನ್ನು ಕವಿ ಗೌರವಿಸಿದ್ದಾರೆ. ಅವರ ಕಾವ್ಯಗಳಲ್ಲಿ ಸ್ತ್ರೀ–ಪುರುಷರ ನಡುವಿನ ಸಮಾನತೆ, ಪರಸ್ಪರ ಗೌರವ ಮತ್ತು ಮಾನವೀಯ ಸಂಬಂಧಗಳ ಮಹತ್ವ ವ್ಯಕ್ತವಾಗಿದೆ. ಈ ಲೇಖನವು ಜಿ.ಎಸ್. ಶಿವರುದ್ರಪ್ಪನವರ ಆಯ್ದ ಕವಿತೆಗಳ ಮೂಲಕ ಸ್ತ್ರೀ ಸಂವೇದನೆಯ ವಿವಿಧ ಆಯಾಮಗಳನ್ನು ವಿಶ್ಲೇಷಿಸುವ ಪ್ರಯತ್ನವಾಗಿದೆ.

ಮುಖ್ಯಪದಗಳು (Keywords): *ಸ್ತ್ರೀ ಸಂವೇದನೆ, ಸ್ತ್ರೀ ಸಮಾನತೆ, ಮಾತೃತ್ವ, ಸ್ತ್ರೀ ಅಸ್ತಿತ್ವ, ಪ್ರೀತಿ, ತ್ಯಾಗ, ಸಾಮಾಜಿಕ ಪರಿವರ್ತನೆ.*

ಪೀಠಿಕೆ

ಸ್ತ್ರೀಯನ್ನು ಗೌರವಿಸುವ ಸಮಾಜವು ಸುಸ್ಥಿರ ಮತ್ತು ಸಮಾನತೆಯ ಸಮಾಜವಾಗಿ ರೂಪುಗೊಳ್ಳುತ್ತದೆ ಎಂಬ ಆಶಯ ಜಿ.ಎಸ್. ಶಿವರುದ್ರಪ್ಪನವರ ಕಾವ್ಯಗಳಲ್ಲಿ ಎದ್ದುಕಾಣುತ್ತದೆ. ಪ್ರೀತಿ, ಕನಸು, ತ್ಯಾಗ ಮತ್ತು ಸಹಾನುಭೂತಿಯ ಮೂಲಕ ಬದುಕನ್ನು ಕಟ್ಟಿಕೊಳ್ಳುವ ಸ್ತ್ರೀ ಸಂವೇದನೆಯು ಅವರ ಹಲವು ಕವಿತೆಗಳಲ್ಲಿ ವ್ಯಕ್ತವಾಗಿದೆ. ಮಾನವೀಯ ದೃಷ್ಟಿಕೋನ, ಪ್ರೀತಿ ಮತ್ತು ಸಮಷ್ಟಿಯ ಹಿತವನ್ನು ಬಯಸುವ ತಾತ್ತ್ವಿಕ ನೆಲೆಗಳು ಅವರ ಕಾವ್ಯದ ಪ್ರಮುಖ ಲಕ್ಷಣಗಳಾಗಿವೆ.

ಜಿ.ಎಸ್. ಶಿವರುದ್ರಪ್ಪನವರು ತಮ್ಮ ಸಾಹಿತ್ಯದಲ್ಲಿ ಸಂಬಂಧಗಳ ನೆಲೆ, ಪೌರಾಣಿಕ ನೆಲೆ, ಪ್ರಕೃತಿಯ ನೆಲೆ, ಐತಿಹಾಸಿಕ ನೆಲೆ ಮತ್ತು ಸಾಮಾಜಿಕ ನೆಲೆ ಎಂಬ ಐದು ಪ್ರಮುಖ ಆಯಾಮಗಳನ್ನು ಒಳಗೊಂಡು

Please cite this article as: ಮೀನಾಕ್ಷಿ, ಎನ್.ಪಿ. (2026). ಜಿ.ಎಸ್.ಎಸ್. ಅವರ ಕಾವ್ಯಗಳಲ್ಲಿ ಸ್ತ್ರೀ ಸಂವೇದನೆ. *ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 8(3).* ಪು.ಸಂ. 7–13

ಕಾವ್ಯ ರಚಿಸಿದ್ದಾರೆ. ಈ ನೆಲೆಗಳ ಮೂಲಕ ಮಾನವ ಜೀವನದ ವಿವಿಧ ಅನುಭವಗಳು ಹಾಗೂ ಸಂಬಂಧಗಳನ್ನು ಪರಿಣಾಮಕಾರಿಯಾಗಿ ಅಭಿವ್ಯಕ್ತಿಸಿದ್ದಾರೆ.

ಜಿ.ಎಸ್. ಶಿವರುದ್ರಪ್ಪನವರು ಚಿಕ್ಕ ವಯಸ್ಸಿನಲ್ಲಿಯೇ ತಾಯಿಯನ್ನು ಕಳೆದುಕೊಂಡರು. ತಾಯಿಯ ನೆನಪು ಅವರ ಬದುಕಿನ ಕೊನೆಯವರೆಗೂ ಅವರನ್ನು ಕಾಡಿತ್ತು. ತಾಯಿಯ ಪ್ರೀತಿಗೆ ಪರ್ಯಾಯವಿಲ್ಲ; ಆಕೆಯ ಮಮತೆ ಮತ್ತು ವಾತ್ಸಲ್ಯಕ್ಕೆ ಯಾವುದನ್ನೂ ಹೋಲಿಸಲಾಗದು ಎಂಬ ಭಾವನೆ ಅವರ ಕಾವ್ಯಗಳಲ್ಲಿ ವ್ಯಕ್ತವಾಗುತ್ತದೆ. ಅಮೃತಪ್ರೇಮವನ್ನು ತಾಯಿ ಮಾತ್ರ ನೀಡಬಲ್ಲಳು ಎಂಬ ನಂಬಿಕೆ ಅವರ ಕಾವ್ಯದ ಪ್ರಮುಖ ಭಾವನೆಗಳಲ್ಲಿ ಒಂದಾಗಿದೆ. ತಾಯಿಯನ್ನು ಕಳೆದುಕೊಂಡ ನೋವಿನ ಹಿನ್ನೆಲೆಯಲ್ಲಿ ಅವರು ಪ್ರತಿಯೊಬ್ಬ ಮಹಿಳೆಯಲ್ಲಿಯೂ ತಾಯಿಯ ರೂಪವನ್ನು ಕಾಣುವ ಮಾನವೀಯ ದೃಷ್ಟಿಕೋನವನ್ನು ಬೆಳೆಸಿಕೊಂಡಿದ್ದರು. ತಾಯ್ತನದ ನೋವು, ಪ್ರೀತಿ ಮತ್ತು ತ್ಯಾಗಗಳ ಮೂಲಕ ಸ್ತ್ರೀ ಸಂವೇದನೆಯ ಆಳವಾದ ಆಯಾಮಗಳನ್ನು ತಮ್ಮ ಕಾವ್ಯಗಳಲ್ಲಿ ಚಿತ್ರಿಸಿದ್ದಾರೆ.

ಜಿ.ಎಸ್.ಎಸ್. ಕಾವ್ಯಗಳಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ

ಜಿ.ಎಸ್.ಎಸ್. ಅವರ ಕಾವ್ಯಗಳಲ್ಲಿ ಸ್ತ್ರೀ ಸಂವೇದನೆಯು ಮೃದುತ್ವ, ಸಮರ್ಪಣಾಭಾವ, ಪ್ರೀತಿ ಮತ್ತು ಬೌದ್ಧಿಕ ಶಕ್ತಿಗಳ ಸಮ್ಮಿಶ್ರಣವಾಗಿ ಮೂಡಿಬಂದಿದೆ. ಹೆಣ್ಣಿನ ಅಂತರಂಗದ ಸೂಕ್ಷ್ಮತೆ, ತಾಯ್ತನದ ಮಹೋನ್ನತೆ ಮತ್ತು ಪ್ರೀತಿಯ ಶಕ್ತಿಯನ್ನು 'ಚೆಲುವು–ಬಲವು' ಸೇರಿದಂತೆ ವಿವಿಧ ಕವಿತೆಗಳಲ್ಲಿ ವೈವಿಧ್ಯಮಯವಾಗಿ ಅಭಿವ್ಯಕ್ತಿಸಿದ್ದಾರೆ. ಮಗುವಿನ ಅಸ್ತಿತ್ವ ಮತ್ತು ತಾಯಿಯ ಮಮತೆಯ ನಡುವಿನ ಅವಿನಾಭಾವ ಸಂಬಂಧವನ್ನು ಕವಿ ಅತ್ಯಂತ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ.

ಪ್ರೀತಿಯೇ ಜೀವನದ ಚಾಲಕಶಕ್ತಿ ಎಂದು ನಂಬಿದ್ದ ಶಿವರುದ್ರಪ್ಪನವರು ಸ್ತ್ರೀ ಸಂವೇದನೆಯಲ್ಲಿ ಪ್ರೀತಿಯನ್ನು ಸಮರ್ಪಣೆ ಮತ್ತು ಮಾನವೀಯತೆಯ ಪ್ರತೀಕವಾಗಿ ಕಾಣುತ್ತಾರೆ. ಹೆಣ್ಣು ಕೇವಲ ಭಾವನಾತ್ಮಕ ಜೀವಿಯಲ್ಲ; ಸಂಕಷ್ಟದ ಸಂದರ್ಭಗಳಲ್ಲಿ ತನ್ನ ಬೌದ್ಧಿಕ ಸಾಮರ್ಥ್ಯ ಮತ್ತು ಅನುಭವದ ಮೂಲಕ ಸಮಸ್ಯೆಗಳನ್ನು ಸಮರ್ಥವಾಗಿ ಎದುರಿಸಬಲ್ಲಳು ಎಂಬ ವಿಚಾರವೂ ಅವರ ಕಾವ್ಯಗಳಲ್ಲಿ ವ್ಯಕ್ತವಾಗಿದೆ.

'ಸ್ತ್ರೀ' ಕವಿತೆಯಲ್ಲಿ ಮಹಿಳೆಯ ವ್ಯಕ್ತಿತ್ವ

ಜಿ.ಎಸ್.ಎಸ್. ಅವರ ಗಮನಾರ್ಹ ಕವಿತೆಗಳಲ್ಲಿ 'ಸ್ತ್ರೀ' ಕವಿತೆಯು ವಿಶೇಷ ಸ್ಥಾನವನ್ನು ಪಡೆದುಕೊಂಡಿದೆ. ಪ್ರಕೃತಿಯ ಚೆಲುವು, ಮಾತೃತ್ವದ ಮಮತೆ ಮತ್ತು ಮಹಿಳೆಯ ಅಂತರಂಗದ ಸೂಕ್ಷ್ಮ ಭಾವನೆಗಳನ್ನು ಅತ್ಯಂತ ಸರಳ ಹಾಗೂ ಸುಂದರ ಪದಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಈ ಕವಿತೆಯಲ್ಲಿ ಸ್ತ್ರೀಯನ್ನು ಕೇವಲ ಒಂದು ಸಂಬಂಧದ ಮೂಲಕ ಗುರುತಿಸದೆ, ಸಮಗ್ರ ಸೃಷ್ಟಿಯ ಸೌಂದರ್ಯ ಮತ್ತು ಶಕ್ತಿಯ ಪ್ರತೀಕವಾಗಿ ಚಿತ್ರಿಸಿದ್ದಾರೆ.

ಆಕಾಶ ನೀಲಿಯಲ್ಲಿ
ಚಂದ್ರತಾರೆ ತೊಟ್ಟಿಲಲ್ಲಿ
ಬೆಳಕನಿತ್ತು ತೂಗಿದಾಕೆ

ನಿನಗೆ ಬೇರೆ ಹೆಸರು ಬೇಕೆ?
ಸ್ತ್ರೀ ಎಂದರೆ ಅಷ್ಟೇ ಸಾಕೆ?

ಮರ ಗಿಡ ಹೂ ಮುಂಗುರುಳನು
ತಂಗಾಳಿಯ ಬೆರಳ ಸವರಿ
ಹಕ್ಕಿ ಗಿಲಕಿ ಹಿಡಿಸಿದಾಕೆ
ನಿನಗೆ ಬೇರೆ ಹೆಸರು ಬೇಕೆ?
ಸ್ತ್ರೀ ಎಂದರೆ ಅಷ್ಟೇ ಸಾಕೆ?

ಮನೆ ಮನೆಯ ದೀಪ ಮುಡಿಸಿ
ಹೊತ್ತು ಹೊತ್ತಿಗೆ ಅನ್ನ ಉಣಿಸಿ
ತಂದೆ ಮಗುವ ತಬ್ಬಿದಾಕೆ
ನಿನಗೆ ಬೇರೆ ಹೆಸರು ಬೇಕೆ?
ಸ್ತ್ರೀ ಎಂದರೆ ಅಷ್ಟೇ ಸಾಕೆ?

ಈ ಕವಿತೆಯಲ್ಲಿ ಸ್ತ್ರೀಯನ್ನು ಪ್ರಕೃತಿ, ಮಾತೃತ್ವ ಮತ್ತು ಕುಟುಂಬದ ಬೆಳಕಿನೊಂದಿಗೆ ಸಮೀಕರಿಸಲಾಗಿದೆ. ಆಕಾಶ, ಚಂದ್ರ, ನಕ್ಷತ್ರ, ಮರಗಿಡ, ಹೂವು ಮತ್ತು ಹಕ್ಕಿಗಳ ಮೂಲಕ ಸ್ತ್ರೀಯ ಸೃಜನಶೀಲ ಹಾಗೂ ಪೋಷಕ ಗುಣಗಳನ್ನು ಕವಿ ಅಭಿವ್ಯಕ್ತಿಸಿದ್ದಾರೆ. ಮನೆಯ ದೀಪವಾಗಿ, ಕುಟುಂಬದ ಸದಸ್ಯರಿಗೆ ಅನ್ನ ಉಣಿಸುವ ಅನ್ನಪೂರ್ಣೆಯಾಗಿ ಮತ್ತು ಮಗುವನ್ನು ಮಮತೆಯಿಂದ ತಬ್ಬಿಕೊಳ್ಳುವ ತಾಯಿಯಾಗಿ ಸ್ತ್ರೀಯನ್ನು ಚಿತ್ರಿಸಿದ್ದಾರೆ.

ಸಿ. ಅಶ್ವತ್ಥ್ ಅವರ ಸುಮಧುರ ಕಂಠ ಮತ್ತು ಸಂಗೀತ ಸಂಯೋಜನೆಯಿಂದ ಈ ಕವಿತೆ ಜನಪ್ರಿಯತೆಯನ್ನು ಗಳಿಸಿದೆ. ಕವಿತೆಯ ಪ್ರತಿಯೊಂದು ಸಾಲಿನಲ್ಲಿಯೂ ಮಹಿಳೆಯ ವ್ಯಕ್ತಿತ್ವ, ಆತ್ಮಗೌರವ ಮತ್ತು ಅಂತರಂಗದ ಸೌಂದರ್ಯ ಪ್ರತಿಬಿಂಬಿತವಾಗಿದೆ. ಹೆಣ್ಣು ತಾನು ಹುಟ್ಟಿದ ಮನೆಯಿಂದ ತಾನು ಸೇರುವ ಮನೆಯವರೆಗೆ ಅಕ್ಕ, ತಂಗಿ, ಪತ್ನಿ, ತಾಯಿ, ಮಗಳು ಮುಂತಾದ ಅನೇಕ ಪಾತ್ರಗಳನ್ನು ನಿರ್ವಹಿಸುತ್ತಾಳೆ. ಈ ಪ್ರತಿಯೊಂದು ಪಾತ್ರವೂ ಆಕೆಯ ಭಾವನಾತ್ಮಕ ಮತ್ತು ಸಾಮಾಜಿಕ ವ್ಯಕ್ತಿತ್ವದ ವಿಭಿನ್ನ ಆಯಾಮಗಳನ್ನು ಪರಿಚಯಿಸುತ್ತದೆ.

ಸ್ತ್ರೀ ಮತ್ತು ಪ್ರಕೃತಿಯ ಅವಿನಾಭಾವ ಸಂಬಂಧ

ಭಾರತೀಯ ಸಾಂಸ್ಕೃತಿಕ ಪರಂಪರೆಯಲ್ಲಿ ಸ್ತ್ರೀಯನ್ನು ಭೂಮಿತಾಯಿಗೆ ಹೋಲಿಸಿ ಗೌರವಿಸಲಾಗಿದೆ. ಕ್ಷಮೆ, ಸಹನೆ, ಪ್ರೀತಿ ಮತ್ತು ವಾತ್ಸಲ್ಯದ ಗುಣಗಳನ್ನು ಹೊಂದಿರುವ ಮಹಿಳೆ ಕುಟುಂಬ ಹಾಗೂ ಸಮಾಜದ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸುತ್ತಾಳೆ. ಕುಟುಂಬದ ಪ್ರತಿಯೊಬ್ಬ ಸದಸ್ಯರ ಬದುಕಿನೊಂದಿಗೆ

ಆಕೆಯ ಬದುಕು ಬೆಸೆದುಕೊಂಡಿರುತ್ತದೆ. ಜೀವನದ ವಿವಿಧ ಸವಾಲುಗಳನ್ನು ತನ್ನ ಅನುಭವ, ಸಹನೆ ಮತ್ತು ಬೌದ್ಧಿಕ ಸಾಮರ್ಥ್ಯದ ಮೂಲಕ ಎದುರಿಸುವ ಶಕ್ತಿ ಮಹಿಳೆಯಲ್ಲಿದೆ.

ಈ ಹಿನ್ನೆಲೆಯಲ್ಲಿ ಕವಿ ಸ್ತ್ರೀಯನ್ನು ಪ್ರಕೃತಿಯ ಸೃಜನಶೀಲ ಶಕ್ತಿಗೆ ಹೋಲಿಸುತ್ತಾರೆ.

ಹಸುರನುಟ್ಟ ಬೆಟ್ಟಗಳಲಿ
ಮೊಲೆ ಹಾಲಿನ ಹೊಳೆಯನಿಳಿಸಿ
ಬಯಲು ಹಸುರ ನಗಿಸಿದಾಕೆ
ನಿನಗೆ ಬೇರೆ ಹೆಸರು ಬೇಕೆ?
ಸ್ತ್ರೀ ಎಂದರೆ ಅಷ್ಟೇ ಸಾಕೆ?

ಈ ಸಾಲುಗಳಲ್ಲಿ ತಾಯ್ತನದ ಮಹತ್ವ ಮತ್ತು ಪ್ರಕೃತಿಯ ಪೋಷಕ ಗುಣಗಳ ನಡುವಿನ ಸಾಮ್ಯವನ್ನು ಕವಿ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಮಗುವಿಗೆ ಎದೆಹಾಲುಣಿಸುವ ತಾಯಿಯ ಮಮತೆಯನ್ನು ಭೂಮಿಯು ಜೀವಸಂಕುಲಕ್ಕೆ ನೀಡುವ ಪೋಷಣೆಗೆ ಹೋಲಿಸಿದ್ದಾರೆ. ಸ್ತ್ರೀಯನ್ನು ಕೇವಲ ಬಾಹ್ಯ ಸೌಂದರ್ಯದ ನೆಲೆಯಲ್ಲಿ ನೋಡುವ ದೃಷ್ಟಿಕೋನವನ್ನು ಮೀರಿ, ಆಕೆಯ ಅಂತರಂಗದ ಸೌಂದರ್ಯ ಮತ್ತು ಸೃಜನಶೀಲತೆಯನ್ನು ಗುರುತಿಸುವಂತೆ ಈ ಕವಿತೆ ಪ್ರೇರೇಪಿಸುತ್ತದೆ.

ಹೆಣ್ಣಿನ ಮಮತೆ, ತ್ಯಾಗ, ಪ್ರೀತಿ ಮತ್ತು ಸಹನೆಯ ಗುಣಗಳನ್ನು ಪ್ರಕೃತಿ ಮಾತೆಯ ವಿವಿಧ ರೂಪಗಳೊಂದಿಗೆ ಕವಿ ಸಮನ್ವಯಗೊಳಿಸಿದ್ದಾರೆ. ಹೀಗಾಗಿ ಈ ಕವಿತೆಯು ಮಹಿಳೆಯ ವ್ಯಕ್ತಿತ್ವವನ್ನು ವಿಶಾಲವಾದ ಮಾನವೀಯ ನೆಲೆಯಲ್ಲಿ ಪರಿಚಯಿಸುತ್ತದೆ.

'ಹೆಣ್ಣಿನ ದನಿ' ಕವಿತೆಯಲ್ಲಿ ಪ್ರೇಮ ಸಂವೇದನೆ

ಜಿ.ಎಸ್.ಎಸ್. ಅವರ ಕಾವ್ಯಗಳಲ್ಲಿ ಸ್ತ್ರೀಯ ಪ್ರೇಮ ಸಂವೇದನೆಗೂ ವಿಶಿಷ್ಟ ಸ್ಥಾನವಿದೆ. 'ಹೆಣ್ಣಿನ ದನಿ' ಕವಿತೆಯಲ್ಲಿ ಪ್ರೀತಿಯ ಸೂಕ್ಷ್ಮ ಭಾವನೆಗಳು, ಸಂಕೋಚ, ಆಕರ್ಷಣೆ ಮತ್ತು ಅಂತರಂಗದ ತುಮುಲಗಳನ್ನು ಸುಂದರವಾಗಿ ಅಭಿವ್ಯಕ್ತಿಸಲಾಗಿದೆ.

ಯಾರವರು ಯಾರವರು ಯಾರವರು ಯಾರೋ?
ಬಾಗಿಲಲಿ ಬಂದವರು ನಿಂದವರು ಯಾರೋ?
ಒಳಗೆಲ್ಲ ಬೆಳಕನ್ನು ಚೆಲ್ಲಿದವರಾರೋ?
ತುಂಬಿದ್ದ ಕತ್ತಲನು ಕಳೆದವರು ಯಾರೋ?

ಈ ಸಾಲುಗಳಲ್ಲಿ ಹೆಣ್ಣು ತನ್ನ ಮನಸ್ಸನ್ನು ಆಕರ್ಷಿಸಿದ ಪ್ರಿಯ ವ್ಯಕ್ತಿಯ ಆಗಮನದಿಂದ ಅನುಭವಿಸುವ ಭಾವನಾತ್ಮಕ ಬದಲಾವಣೆಗಳನ್ನು ಕವಿ ಚಿತ್ರಿಸಿದ್ದಾರೆ. ಪ್ರೀತಿಯನ್ನು ನೇರವಾಗಿ ವ್ಯಕ್ತಪಡಿಸದೆ, ಪ್ರಶ್ನೆಗಳ ಮೂಲಕ ತನ್ನ ಅಂತರಂಗದ ಭಾವನೆಗಳನ್ನು ಹೊರಹಾಕುವ ಸ್ತ್ರೀಯ ಮನೋಸ್ಥಿತಿಯನ್ನು ಇಲ್ಲಿ ಕಾಣಬಹುದು.

ಸಾಮಾನ್ಯವಾಗಿ ಕಾವ್ಯಗಳಲ್ಲಿ ಹೆಣ್ಣನ್ನು ಹೂವಿಗೆ ಹೋಲಿಸುವ ಪರಂಪರೆ ಇದೆ. ಆದರೆ ಈ ಕವಿತೆಯಲ್ಲಿ ಪ್ರೇಮಿಯ ಸೌಂದರ್ಯವನ್ನು ವಿಶಿಷ್ಟ ರೂಪಕಗಳ ಮೂಲಕ ಚಿತ್ರಿಸುವ ಪ್ರಯತ್ನ ಕಂಡುಬರುತ್ತದೆ. ಪ್ರೀತಿಯ ಭಾವನೆ, ಸಂಕೋಚ ಮತ್ತು ಆಕರ್ಷಣೆಗಳ ಸಮ್ಮಿಲನದಿಂದ ಕವಿತೆಯು ಗೀತಾತ್ಮಕ ಸೌಂದರ್ಯವನ್ನು ಪಡೆದುಕೊಂಡಿದೆ. ಸ್ತ್ರೀಯ ಪ್ರೇಮಾನುಭವವನ್ನು ಕೇವಲ ಬಾಹ್ಯ ಸೌಂದರ್ಯಕ್ಕೆ ಸೀಮಿತಗೊಳಿಸದೆ, ಆಕೆಯ ಅಂತರಂಗದ ಭಾವನೆಗಳಿಗೆ ಕವಿ ಮಹತ್ವ ನೀಡಿದ್ದಾರೆ.

ಮಾತೃತ್ವದ ಮಹತ್ವ ಮತ್ತು ತಾಯಿಯ ಪ್ರೀತಿ

ಜಿ.ಎಸ್.ಎಸ್. ಅವರ ಕಾವ್ಯಗಳಲ್ಲಿ ಮಾತೃತ್ವದ ಭಾವನೆ ಅತ್ಯಂತ ಗಾಢವಾಗಿ ವ್ಯಕ್ತವಾಗಿದೆ. ತಾಯಿ ಮತ್ತು ಮಗುವಿನ ನಡುವಿನ ಸಂಬಂಧವು ಜನನಕ್ಕೂ ಮೊದಲೇ ಆರಂಭವಾಗುವ ಭಾವನಾತ್ಮಕ ಸಂಬಂಧವಾಗಿದೆ ಎಂಬುದನ್ನು ಕವಿ ಸೂಕ್ಷ್ಮವಾಗಿ ಅಭಿವ್ಯಕ್ತಿಸಿದ್ದಾರೆ. ತಾಯಿಯ ಗರ್ಭದಲ್ಲಿ ಮಗುವಿನ ಅಸ್ತಿತ್ವ ರೂಪುಗೊಳ್ಳುವ ಮೊದಲೇ ಅದರ ಕುರಿತು ತಾಯಿಯ ಮನಸ್ಸಿನಲ್ಲಿ ಮೂಡುವ ಕಲ್ಪನೆಗಳನ್ನು ಕವಿತೆಯ ಮೂಲಕ ಚಿತ್ರಿಸಿದ್ದಾರೆ.

ನನ್ನ ಗರ್ಭದಲ್ಲಿ ಮೂಡಿ ಬರುವ ಮೊದಲೆ ಇದ್ದೆ ಮಗುವೇ?
ಯಾವ ರೂಪದಲ್ಲಿ ಯಾವ ದೇಶದಲ್ಲಿ ಯಾವ ಹೆಸರಿನಲ್ಲಿ?
ಎಷ್ಟು ಜನರಲಿ ಎಷ್ಟು ಯುಗಗಳಲಿ ತಾರೆ ಗ್ರಹಗಳಲ್ಲಿ
ಸುತ್ತಿ ಬಂದಯೇ ಏನು ತಿಳಿಯೊದೊಲು ಬಂದೆ ನಟಿಸುತ್ತಿರುವೆ!

ಈ ಕವನದ ಸಾಲುಗಳಲ್ಲಿ ತಾಯಿಯು ತನ್ನ ಗರ್ಭದಲ್ಲಿ ಮೂಡಿಬರುವ ಮಗುವಿನ ಕುರಿತು ಹೊಂದಿರುವ ಕಲ್ಪನೆ ಮತ್ತು ಭಾವನೆಗಳನ್ನು ಕವಿ ಅರ್ಥಪೂರ್ಣವಾಗಿ ವಿವರಿಸಿದ್ದಾರೆ. ಮಗುವಿನ ಅಸ್ತಿತ್ವ, ಜನನ ಮತ್ತು ತಾಯಿಯೊಂದಿಗಿನ ಸಂಬಂಧದ ಕುರಿತು ತಾತ್ವಿಕ ಚಿಂತನೆ ಇಲ್ಲಿ ವ್ಯಕ್ತವಾಗಿದೆ. ತಾಯಿ ಮತ್ತು ಮಗುವಿನ ನಡುವಿನ ಸಂಬಂಧವು ಕೇವಲ ಜೈವಿಕ ಸಂಬಂಧವಲ್ಲ; ಅದು ಪ್ರೀತಿ, ಮಮತೆ ಮತ್ತು ಭಾವನಾತ್ಮಕ ಬಂಧದಿಂದ ಕೂಡಿದ ಪವಿತ್ರ ಸಂಬಂಧವಾಗಿದೆ.

ಭಾರತೀಯ ಪರಂಪರೆಯಲ್ಲಿಯೂ ತಾಯಿಗೆ ಅತ್ಯಂತ ಉನ್ನತ ಸ್ಥಾನವನ್ನು ನೀಡಲಾಗಿದೆ. ಆದಿ ಶಂಕರಾಚಾರ್ಯರ 'ಮಾತೃಪಂಚಕ'ದಲ್ಲಿ ತಾಯಿಯು ಮಗುವನ್ನು ಗರ್ಭದಲ್ಲಿ ಹೊತ್ತು, ಜನ್ಮ ನೀಡಿ, ಪೋಷಿಸುವ ಸಂದರ್ಭದಲ್ಲಿ ಅನುಭವಿಸುವ ಕಷ್ಟ ಮತ್ತು ತ್ಯಾಗಗಳನ್ನು ಸ್ಮರಿಸಲಾಗಿದೆ. ತಾಯಿಯ ಋಣವನ್ನು ಮಗನು ಎಂದಿಗೂ ತೀರಿಸಲಾಗುವುದಿಲ್ಲ ಎಂಬ ಭಾವನೆ ಈ ಕೃತಿಯಲ್ಲಿ ವ್ಯಕ್ತವಾಗಿದೆ. ಜಿ.ಎಸ್.ಎಸ್. ಅವರ ಕಾವ್ಯಗಳಲ್ಲಿಯೂ ತಾಯಿಯ ತ್ಯಾಗ, ಪ್ರೀತಿ ಮತ್ತು ಮಮತೆಯ ಮಹತ್ವ ಇದೇ ರೀತಿಯಲ್ಲಿ ಪ್ರತಿಬಿಂಬಿತವಾಗಿದೆ.

ತಾಯಿಯ ಪ್ರೀತಿಯನ್ನು ಸ್ಮರಿಸುವ ಮತ್ತೊಂದು ಕವಿತೆಯಲ್ಲಿ ಕವಿ ಹೀಗೆ ಹೇಳುತ್ತಾರೆ:

ತಾಯೊಲವೆ ತಾಯೊಲವೆ ಈ ಲೋಕದೊಳಗೆ
ಕಡಲಿಂಗೆ ಕಡಲಲ್ಲದುಂಟೆ ಹೋಲಿಕೆಗೆ

ಓ ಅಮೃತ ಪ್ರೇಮವೇ

ಓ ಮಾತೃ ರೂಪವೇ

ತೀರಲಾರದ ತೃಷೆಗೆ ಮರು ಜನ್ಮ ಬೇಕು

ಮತ್ತೊಮ್ಮೆ ಶಿಶುವಾಗಿ ನಾ ನಲಿಯಬೇಕು

ಈ ಕವಿತೆಯಲ್ಲಿ ತಾಯಿಯ ಪ್ರೀತಿಯ ಅನನ್ಯತೆಯನ್ನು ಕವಿ ಮನಮುಟ್ಟುವಂತೆ ಅಭಿವ್ಯಕ್ತಿಸಿದ್ದಾರೆ. ಬಾಲ್ಯದಲ್ಲಿಯೇ ತಾಯಿಯನ್ನು ಕಳೆದುಕೊಂಡ ಕಾರಣದಿಂದ ಅವರ ಮನಸ್ಸಿನಲ್ಲಿ ತಾಯಿಯ ಪ್ರೀತಿಯ ನೆನಪು ಆಳವಾಗಿ ನೆಲೆಗೊಂಡಿತ್ತು. ಆ ಪ್ರೀತಿಯನ್ನು ಮತ್ತೊಮ್ಮೆ ಅನುಭವಿಸುವ ಹಂಬಲದಿಂದ ಮುಂದಿನ ಜನ್ಮದಲ್ಲಾದರೂ ತಾಯಿಯ ಮಗುವಾಗಿ ಹುಟ್ಟಬೇಕೆಂಬ ಆಸೆಯನ್ನು ವ್ಯಕ್ತಪಡಿಸಿದ್ದಾರೆ. ತಾಯಿಯ ಮಮತೆಗೆ ಈ ಜಗತ್ತಿನಲ್ಲಿ ಯಾವುದೂ ಪರ್ಯಾಯವಾಗಲಾರದು ಎಂಬ ಭಾವನೆ ಈ ಸಾಲುಗಳಲ್ಲಿ ಸ್ಪಷ್ಟವಾಗಿ ಮೂಡಿಬಂದಿದೆ.

ಸ್ತ್ರೀ ಸೌಂದರ್ಯ ಮತ್ತು ಸಾಂಸ್ಕೃತಿಕ ಅಭಿವ್ಯಕ್ತಿ

ಜಿ.ಎಸ್.ಎಸ್. ಅವರ ಕೆಲವು ಕವಿತೆಗಳಲ್ಲಿ ಸ್ತ್ರೀಯ ಬಾಹ್ಯ ಸೌಂದರ್ಯ ಮತ್ತು ಸಾಂಸ್ಕೃತಿಕ ವ್ಯಕ್ತಿತ್ವವನ್ನು ಪ್ರಕೃತಿಯ ರೂಪಕಗಳ ಮೂಲಕ ಚಿತ್ರಿಸಲಾಗಿದೆ. ವಿಶೇಷವಾಗಿ ಹೆಣ್ಣಿನ ಕೇಶರಾಶಿಯ ವರ್ಣನೆಯಲ್ಲಿ ಕವಿಯ ಕಲ್ಪನಾಶಕ್ತಿ ಮತ್ತು ಭಾಷಾ ಸೌಂದರ್ಯ ಎದ್ದು ಕಾಣುತ್ತದೆ.

ಲಲನೆಯರ ಬೆನ್ನಿನೆಡೆ ಹಾವಿನೋಲು

ಜೋಲು ಜಡೆ

ಕಾರಂದೆಯಂತಿಳಿದು ಕೊರಳಿಡೆಗೆ

ಕವಲೊಡೆದು

ಅತ್ತಿತ್ತು ಹರಿದ ಜಡೆ

ಈ ಸಾಲುಗಳಲ್ಲಿ ಹೆಣ್ಣಿನ ಕೇಶರಾಶಿಯ ವಿವಿಧ ರೂಪಗಳನ್ನು ಪ್ರಕೃತಿ ಮತ್ತು ಜೀವನದ ದೃಶ್ಯಗಳಿಗೆ ಹೋಲಿಸಿ ವರ್ಣಿಸಲಾಗಿದೆ. ಹಾವಿನಂತೆ ಹರಿಯುವ ಜಡೆ, ಉದ್ದವಾದ ಕೇಶರಾಶಿ ಮತ್ತು ಅದರ ವಿವಿಧ ಅಲಂಕಾರಿಕ ರೂಪಗಳು ಕವಿಯ ಕಲ್ಪನೆಯಲ್ಲಿ ಜೀವಂತವಾಗಿ ಮೂಡಿಬಂದಿವೆ.

ಹೆಣ್ಣಿನ ಜಡೆ ಕೇವಲ ಕೂದಲಿನ ವಿನ್ಯಾಸ ಅಥವಾ ಅಲಂಕಾರಕ್ಕೆ ಸೀಮಿತವಾಗಿಲ್ಲ. ಅದು ಸಾಂಪ್ರದಾಯಿಕ ಜೀವನಶೈಲಿ, ಸೌಂದರ್ಯಪ್ರಜ್ಞೆ ಮತ್ತು ಸಾಂಸ್ಕೃತಿಕ ಅಭಿವ್ಯಕ್ತಿಯ ಸಂಕೇತವೂ ಆಗಿದೆ. ಮಲ್ಲಿಗೆ, ಕೇದಗೆ ಮುಂತಾದ ಹೂವುಗಳಿಂದ ಅಲಂಕರಿಸಿದ ಜಡೆಯ ಮೂಲಕ ಮಹಿಳೆಯ ಸಾಂಪ್ರದಾಯಿಕ ಸೌಂದರ್ಯವನ್ನು ಕವಿ ಚಿತ್ರಿಸಿದ್ದಾರೆ. ಸರಳ ಭಾಷೆ, ಸುಂದರ ರೂಪಕಗಳು ಮತ್ತು ಭಾವನಾತ್ಮಕ ಅಭಿವ್ಯಕ್ತಿಗಳಿಂದ ಈ ಕವಿತೆಯು ಗಮನ ಸೆಳೆಯುತ್ತದೆ.

ಉಪಸಂಹಾರ

ಒಟ್ಟಾರೆಯಾಗಿ ಹೇಳುವುದಾದರೆ, ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರ ಕಾವ್ಯಗಳಲ್ಲಿ ಸ್ತ್ರೀ ಸಂವೇದನೆಯು ಬಹುಮುಖವಾಗಿ ಅಭಿವ್ಯಕ್ತಗೊಂಡಿದೆ. ತಾಯಿ, ಪತ್ನಿ, ಮಗಳು, ಅಕ್ಕ, ತಂಗಿ ಮುಂತಾದ

ವಿವಿಧ ಸಂಬಂಧಗಳ ಮೂಲಕ ಮಹಿಳೆಯ ವ್ಯಕ್ತಿತ್ವವನ್ನು ಅವರು ಚಿತ್ರಿಸಿದ್ದಾರೆ. ವಿಶೇಷವಾಗಿ ತಾಯಿಯ ಪ್ರೀತಿ, ಮಾತೃತ್ವದ ಮಹತ್ವ, ಸ್ತ್ರೀಯ ತ್ಯಾಗ, ಪ್ರೇಮ ಸಂವೇದನೆ ಮತ್ತು ಸೃಜನಶೀಲತೆಯನ್ನು ತಮ್ಮ ಕಾವ್ಯಗಳ ಪ್ರಮುಖ ಆಶಯಗಳನ್ನಾಗಿ ಮಾಡಿಕೊಂಡಿದ್ದಾರೆ. ಅವರ ಕಾವ್ಯಗಳಲ್ಲಿ ಸ್ತ್ರೀಯು ಕೇವಲ ಸೌಂದರ್ಯದ ಪ್ರತೀಕವಾಗಿರದೆ, ಕುಟುಂಬ ಮತ್ತು ಸಮಾಜವನ್ನು ರೂಪಿಸುವ ಶಕ್ತಿಯಾಗಿ ಕಾಣಿಸಿಕೊಳ್ಳುತ್ತಾಳೆ. ಮಹಿಳೆಯ ಅಂತರಂಗದ ಸೂಕ್ಷ್ಮತೆ, ಬೌದ್ಧಿಕ ಸಾಮರ್ಥ್ಯ, ಆತ್ಮಗೌರವ ಮತ್ತು ಮಾನವೀಯ ಮೌಲ್ಯಗಳಿಗೆ ಕವಿ ವಿಶೇಷ ಮಹತ್ವ ನೀಡಿದ್ದಾರೆ. ಸ್ತ್ರೀ–ಪುರುಷರ ನಡುವಿನ ಪರಸ್ಪರ ಗೌರವ, ಸಮಾನತೆ ಮತ್ತು ಸಾಮರಸ್ಯದ ಮೂಲಕ ಉತ್ತಮ ಸಮಾಜವನ್ನು ನಿರ್ಮಿಸಬಹುದು ಎಂಬ ಆಶಯ ಅವರ ಕಾವ್ಯಗಳಲ್ಲಿ ವ್ಯಕ್ತವಾಗಿದೆ. ಹೀಗಾಗಿ ಜಿ.ಎಸ್. ಶಿವರುದ್ರಪ್ಪನವರ ಕಾವ್ಯಗಳಲ್ಲಿ ಸ್ತ್ರೀ ಸಂವೇದನೆಯು ಕೇವಲ ವೈಯಕ್ತಿಕ ಭಾವನೆಗಳ ಅಭಿವ್ಯಕ್ತಿಯಾಗಿರದೆ, ಸಮಾನತೆ, ಮಾನವೀಯತೆ ಮತ್ತು ಸಮಷ್ಟಿ ಪ್ರಜ್ಞೆಯನ್ನು ಪ್ರತಿಪಾದಿಸುವ ವಿಶಾಲವಾದ ತಾತ್ವಿಕ ನೆಲೆಯಾಗಿ ರೂಪುಗೊಂಡಿದೆ.

ಪರಾಮರ್ಶನ ಗ್ರಂಥಗಳು

- ವಿದ್ಯಾಶಂಕರ, ಎಸ್. (ಸಂ.). ನೆನಪಿನಂಗಳದಲ್ಲಿ ಡಾ. ಜಿ.ಎಸ್.ಎಸ್.
- ಹಣತೆ – ಜಿ.ಎಸ್.ಎಸ್. ಅಭಿನಂದನಾ ಗ್ರಂಥ.
- ಪ್ರಸಾದಸ್ವಾಮಿ, ಎಸ್. *ಪರಂಪರೆ ಮತ್ತು ವಿಕ್ಷಿಪ್ತತೆ*
- ಬೋರೆಗೌಡ ಚಿಕ್ಕಮರಳಿ. (ಸಂ.) ರಾಷ್ಟ್ರಕವಿ ಜಿ.ಎಸ್.ಎಸ್. ಅವರ ಕಾವ್ಯ: ಒಂದು ಮರುಓದು